## ಹುಚ್ಚು ಏನಾಯಿತು?

ನನ್ನ ಪರಿಚಯದವರೊಬ್ಬರ ಹೆಸರು 'ಹುಚ್ಚುರಾಯ'. ಅವರ ಸ್ನೇಹಿತರೆಲ್ಲ ಅವರನ್ನು 'ಹುಚ್ಚು ಹೇಗಿದ್ದೀಯ' ಎಂದು ಕೇಳುತ್ತಿದ್ದರು. ತನ್ನ 'ಹುಚ್ಚು' ಎಂಬ ಹೆಸರಿನಿಂದ ಬೇಸತ್ತ ಅವರು ತಮ್ಮ ಹೆಸರನ್ನು ಎಚ್. ರಾವ್ ಎಂದು ಬದಲಿಸಿಕೊಂಡರು. ಆದರೂ ಅವರ ಬವಣೆ ತಪ್ಪಲಿಲ್ಲ. ಏಕೆಂದರೆ ಸ್ನೇಹಿತರೆಲ್ಲ ಅವರನ್ನು 'ಹುಚ್ಚು ಹೆಚ್ಚಾಯ್ತಾ?' (ಎಚ್ ಆಯಿತಾ?) ಎಂದು ರೇಗಿಸಲು ಆರಂಭಿಸಿದರು!

**ಜಿ. ಸುಬ್ರಹ್ಮಣ್ಯ**



## ಮಾತೇ ಮಾತು

ನನ್ನ ಪರಿಚಿತರಾದ ಪಂಕಜಮ್ಮ ಯಾರೊಂದಿಗಾದರೂ ಮಾತಿಗೆ ನಿಂತರೆಂದರೆ ನಿಂತ ನೆಲವೇ ಕುಸಿದದ್ದೂ ಅವರ ಗಮನಕ್ಕೆ ಬರುತ್ತಿರಲಿಲ್ಲ. ಒಂದು ದಿನ ಅವರ ಪರಿಚಿತ ಮಹಿಳೆಯೊಬ್ಬಳು ಪಂಕಜಮ್ಮನ ಮನೆಗೆ ಬಂದಿದ್ದಳು. ಪಂಕಜಮ್ಮ ಆಕೆಯನ್ನು ಮನೆಯ ಒಳಗೂ ಸಹ ಕರೆಯದೇ ಮನೆಯ ಅಂಗಳದಲ್ಲೇ ನಿಲ್ಲಿಸಿ ಮಾತಿಗೆ ಶುರು ಹಚ್ಚಿದರು. ಎಷ್ಟು ಸಮಯ ಕಳೆದರೂ ಅವರ ಮಾತು ಮುಂದುವರೆದೇ ಇತ್ತು. ಅಷ್ಟರಲ್ಲೇ ಮನೆಯ ಒಳಗಡೆಯಿಂದ ಪಂಕಜಮ್ಮನ ಗಂಡ ಒಂದೇ ಸವನೆ ಕೂಗತೊಡಗಿದರು, 'ಏನೋ ವಾಸನಿ ಬರಾಕ್ ಹತ್ತಾವು ಗ್ಯಾಸಿನ ಮ್ಯಾಗ ಅನ್ನ ಸೀದು ಹೋಗಿರಬೇಕು, ಬೇಗ ನೋಡೇ' ಎಂದು. ಆದಕ್ಕೆ ಪಂಕಜಮ್ಮ, 'ಅನ್ನ ಸೀದು ಹೋದ್ರ ಹೋಗ್ಲಿ ಬಿಡ್ರೀ. ಒಳಗ ಅಕ್ಕಿ ಅದಾವು. ಇವ್ರು ಮಾತಾಡೋರು ಮತ್ ಸಿಗ್ತಾರೇನು?' ಎಂದು ಹೇಳಿ ಪುನಃ ಮಾತು ಮಂದುವರೆಸಿದರು!...



ಚಿತ್ರಗಳು: ಗಣೇಶ ಆಚಾರ್ಯ

**ಲಲಿತಾ ಸುವರ್ಣ**